ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **03.11.2023**

ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಇ ಪಿ ವಕೀಲರಿಂದ

ನಿಪಿ-20 ದಾಖಲೆಯಲ್ಲಿ 1 ನೇ ಆರೋಪಿ ದಿಃ 29.10.2010 ರಂದು ಪುಟ ಸಂಃ 27 ರಲ್ಲಿ ಹಣವನ್ನು ಕಂತು ಕಂತಾಗಿ ನೀಡಿರುವುದು ಸರಿ ಎಂದು ಒಪ್ಪಿಕೊಂಡಿರುವ ಕಾರಣ ಅದನ್ನು ಹಾಜರುಪಡಿಸಲಾಗಿದೆ. ನಿಪಿ-20 ಪುಟ ಸಂಃ 27 ರಲ್ಲಿ ಗುರುತು ಮಾಡಿರುವ ಭಾಗದಲ್ಲಿ 1 ನೇ ಆರೋಪಿ ಯಾವ ಯಾವ ಧರ್ಮದರ್ಶಿಗಳಿಂದ ಎಷ್ಟು ಹಣ ಪಡೆದಿದ್ದಾರೆ ಎನ್ನುವ ಬಗ್ಗೆ ಹೇಳಿಕೆ ಇಲ್ಲ ಎಂದರೆ ಸರಿ. ನಿಪಿ-8 ನ್ನು ಓ ಎಸ್ ನಂಃ 68/2009 ರ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದ್ರಿ ದಾವೆಯಲ್ಲಿ ನಾನು ಸಾಕ್ಷಿದಾರನಾಗಿ ಹೇಳಿಕೆ ನೀಡಿರುತ್ತೇನೆ. ನಿಪಿ-8 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಸದ್ರಿ ದಾವೆಯಲ್ಲಿ ನನ್ನ ವಿಚಾರಣೆಯಲ್ಲಿ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿಗೆ ಓ ಎಸ್ ನಂಃ 68/2009 ರ ದಾವೆಯ ವಾದ ಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು, ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ನಿಡಿ-11 ಎಂದು ಗುರುತಿಸಲಾಯಿತು.

ಚಾಸಾ-7, 9 ಮತ್ತು 11 ರವರೊಂದಿಗೆ ನನ್ನ ಒಡನಾಟ ಚೆನ್ನಾಗಿದೆ. ಮೇಲೆ ಹೇಳಿದ ದಾವೆಯಲ್ಲಿ ಚಾಸಾ-7, 9 ಮತ್ತು 11 ರವರು ಸಲ್ಲಿಸಿರುವ ಪ್ರತಿವಾದ ಪತ್ರದ ಸಾರಾಂಶ ನನಗೆ ನೆನಪಿಲ್ಲ. ಚಾಸಾ-7, 9 ಮತ್ತು 11 ರವರು ನಾನು ಚಾಸಾ-8, ಚಾಸಾ-1, ಚಾಸಾ-12, 13 ಮತ್ತು 14 ರವರು ಜ್ಞಾನ ಗಂಗಾ ಟ್ರಸ್ಟ್ ನ ಹಿತಾಶಕ್ತಿಗೆ ಬದ್ಧವಾಗಿ ನಡೆದುಕೊಳ್ಳುತ್ತಿಲ್ಲವೆಂದು ಹೇಳಿಕೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿಯವರು ಟ್ರಸ್ಟ್ ನ ಆಸ್ತಿಯನ್ನು ನಮ್ಮ ಸ್ವಂತ ಬಳಕೆಗೆ ದುರುಪಯೋಗಿ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-7, ನಿಪಿ-9 ರಿಂದ 12 ದಾಖಲೆಗಳನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಲಾಗಿದೆ ಎಂದು ನನಗೆ ನೆನಪಿಲ್ಲ. ನಿಪಿ-7 ರಲ್ಲಿ ಆರೋಪಿಗಳು ಟ್ರಸ್ಟಿನ ಹಣವನ್ನು ದುರುಪಯೋಗಿ ಪಡಿಸಿಕೊಂಡಿರುವ ಕಾರಣ ಅವರನ್ನು ಅಮಾನತ್ತು ಪಡಿಸುತ್ತಿರುವುದಾಗಿ ತಿಳಿಸಲಾಗಿರುತ್ತದೆ. ಸದ್ರಿ ಅಂಶ ನಿಪಿ-7 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ರೂ.50,000/- ಮತ್ತು ರೂ.1,08,000/- ಗಳ ಚೆಕ್ಕುಗಳನ್ನು ಬಲವಂತವಾಗಿ ತೆಗೆದುಕೊಂಡು ಹೋಗಿರುವ ಬಗ್ಗೆ ಕೇಳಲಾಗಿರುತ್ತದೆ. ನಿಪಿ-7 ರಲ್ಲಿ ತಿಳಿಸಿರುವ ದಿಃ 04.06.2007 ರ ಘಟನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದ್ರಿ ಪ್ರಕರಣದಲ್ಲಿ ಆರೋಪಿಗಳು ನಿರ್ಧೋಷಿಗಳು ಎಂದು ತೀರ್ಮಾನವಾಗಿದೆ ಎಂದರೆ ಸರಿ. ಮೇಲೆ ಹೇಳಿದ ಹಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕ್ರಿಮಿನಲ್ ಪ್ರಕರಣಗಳು ಮತ್ತು ನಿಪಿ-7 ರ 3 ನೇ ಪುಟದ ಮೊದಲನೆ ಖಂಡಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದ್ರಿ ಪ್ರಕರಣಗಳಲ್ಲಿ ಆರೋಪಿಗಳು ನಿರ್ಧೋಷಿಗಳು ಎಂದು ತೀರ್ಮಾನವಾಗಿದೆ ಎಂದರೆ ಸರಿ. ನಿಪಿ-7 ರಲ್ಲಿ ತಿಳಿಸಿರುವ ಕಾರಣಗಳಿಗೆ ಹೊರತುಪಡಿಸಿ ಬೇರೆ ಯಾವುದೆ ಕಾರಣಗಳಿಗೆ ಆರೋಪಿಗಳನ್ನು ಅಮಾನತ್ತು ಪಡಿಸಲಾಗಿರುವುದಿಲ್ಲ ಎಂದರೆ ಸರಿ.

ಯಾವುದೆ ಅಧ್ಯಕ್ಷರು ಸ್ವಇಚ್ಛೆಯಿಂದ ಯಾವುದೆ ಧರ್ಮದರ್ಶಿಗಳನ್ನು ಅಮಾನತ್ತು ಪಡಿಸುವ ಅಧಿಕಾರ ಇರುವುದಿಲ್ಲ ಎಂದರೆ ಸರಿ. ಧರ್ಮದರ್ಶಿಗಳು ಟ್ರಸ್ಟಿಗೆ ವಿರುದ್ಧವಾಗಿ ನಡೆದುಕೊಂಡಲ್ಲಿ ಸರ್ವ ಟ್ರಸ್ಟಿಗಳ ಮಹಾ ಸಭೆಯ ಬಹುಮತ ತೀರ್ಮಾನದಂತೆ ಸದ್ರಿ ಧರ್ಮದರ್ಶಿಯನ್ನು ಟ್ರಸ್ಟಿನಿಂದ ಹೊರ ಹಾಕಬಹುದು ಎಂದರೆ ಸರಿ. ಸದ್ರಿ ಷರತ್ತು ನಿಪಿ-4 ರ ನಿಯಮಾವಳಿ -17 ಊ ರಲ್ಲಿ ಉಲ್ಲೇಖವಾಗಿದೆ ಎಂದರೆ ಸರಿ. ನಿಪಿ-7 ರಲ್ಲಿ ಮಿನಿಟ್ಸ್ ಅಫ್ ಮೀಟಿಂಗ್ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಿಪಿ-7 ತೀರ್ಮಾನ ಕೈಗೊಳ್ಳುವ ಪೂರ್ವದಲ್ಲಿ ಸರ್ವ ಧರ್ಮದರ್ಶಿಗಳ ವಿಶೇಷ ಮಹಾ ಸಭೆ ಕರೆಯಲಾಗಿದ್ದು ದಿನಾಂಕ ನನಗೆ ನೆನಪಿಲ್ಲ. ಸದ್ರಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ನಡಾವಳಿ ಪುಸ್ತಕದಲ್ಲಿ ನಮೂದು

ಮಾಡಲಾಗಿದೆ. ಸದ್ರಿ ಸಭೆಗೆ ಕೋರಂ ಗೆ ಅಗತ್ಯವಿರುವ ಎಷ್ಟು ಧರ್ಮದರ್ಶಿಗಳು ಹಾಜರಿದ್ದರು ಎನ್ನುವ ಬಗ್ಗೆ ನನಗೆ ನೆನಪಿಲ್ಲ. ನಿಪಿ-7 ರೊಂದಿಗೆ ನಡಾವಳಿಯ ಪ್ರತಿಯನ್ನು ಕಳುಹಿಸಲು ಯಾವುದೆ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ನ್ನು ಆರೋಪಿಗಳಿಗೆ ನೀಡುವ ಮೊದಲು ಯಾವುದೆ ವಿಶೇಷ ಧರ್ಮದರ್ಶಿಗಳ ಮಹಾ ಸಭೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದ್ರಿ ಸಭೆಯ ತಿಳುವಳಿಕೆ ಪತ್ರ ಹಾಗೂ ನಡಾವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-7 ನ್ನು ನನ್ನ ವೈಯಕ್ತಿಕ ತೀರ್ಮಾನದಿಂದ ಆರೋಪಿಗಳಿಗೆ ನೀಡಲಾಗಿದೆ ಎಂದರೆ ಸರಿಯಲ್ಲ.

ಓ ಎಸ್ ನಂಃ 68/2009 ರ ತೀರ್ಪು ಏನು ಎಂದು ನನಗೆ ನೆನಪಿದೆ. ಸದ್ರಿ ತೀರ್ಪಿನಲ್ಲಿ ಆರೋಪಿಗಳನ್ನು ಅಮಾನತ್ತು ಪಡಿಸಿರುವುದು ಸಮಂಜಸವೆಂದು ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ನಾನು, ಚಾಸಾ-1 ಮತ್ತು 8 ರವರು ಅಧ್ಯಕ್ಷರು, ಖಜಾಂಚಿ ಹಾಗೂ ಕಾರ್ಯದರ್ಶಿಯಾಗಿರುವುದು ಕಾನೂನು ಬಾಹಿರ ವೆಂದು ತೀರ್ಮಾನವಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದ್ರಿ ತೀರ್ಪಿನ ಮೇಲೆ ಅಫೀಲನ್ನು ಸಲ್ಲಿಸಲಾಗಿದೆ ಎಂದು ನುಡಿಯುವರು. ನಿಪಿ-9 ಮತ್ತು 10 ರಂತೆ ವಿಚಾರಣಾ ವರದಿಯು ಕಾನೂನು ಬಾಹಿರವೆಂದು ಸದ್ರಿ ತೀರ್ಪಿನಲ್ಲಿ ತಿಳಿಸಲಾಗಿದೆ ಎಂದರೆ ಸರಿ. ಓ ಎಸ್ ನಂಃ 68/2009 ರಲ್ಲಿ ನೀಡಿದ ನನ್ನ ಪ್ರಮಾಣ ಪತ್ರ ಮತ್ತು ಪಾಟೀ ಸವಾಲನ್ನು ತನಿಖಾಧಿಕಾರಿಗಳಿಗೆ ನೀಡಲು ಯಾವುದೆ ತೊಂದರೆ ಇರಲಿಲ್ಲ. ಸಾಕ್ಷಿಗೆ ಓ ಎಸ್ ನಂಃ 68/2009 ರ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ ಪಾಟೀ ಸವಾಲಿನ ದೃಢೀಕೃತ ನಕಲನ್ನು ತೋರಿಸಿದ್ದು, ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ಅದನ್ನು ನಿಡಿ-12 ಎಂದು ಗುರುತಿಸಲಾಯಿತು.

ಆರೋಪಿಗಳು ನಮ್ಮ ವಿರುದ್ಧ ಸಿವಿಲ್ ಪ್ರಕರಣ ದಾಖಲಿಸಿದ ನಂತರ ಈ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿ. ಪ್ರಸ್ತುತ ಪ್ರಕರಣ ದಾಖಲಿಸಿದ ನಂತರ ಸಿವಿಲ್ ದಾವೆಯಲ್ಲಿ ವಿಚಾರಣೆ ನೀಡಿರುತ್ತೇನೆ ಎಂದರೆ ಇರಬಹುದು. ನನ್ನ ವಿಚಾರಣೆಯಲ್ಲಿ ಆರೋಪಿಗಳು ಧರ್ಮದರ್ಶಿಗಳಾಗಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿಗಳು ನಮ್ಮ ವಿರುದ್ಧ ಸಿವಿಲ್ ಪ್ರಕರಣ ದಾಖಲಿಸಿದ್ದಾರೆ ಎಂಬ ಕಾರಣಕ್ಕೆ ಪ್ರತಿರೋಧವಾಗಿ ಈ ಪ್ರಕರಣವನ್ನು ಸೃಷ್ಟಿಸಿ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ